ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಕಾರ್ಯಾಲಯ, ಕೆ ಆರ್ ವೃತ್ತ, ಬೆಂಗಳೂರು-560001.

ಸಂಖ್ಯೆ: ಬೆವಿಕಂ/ಬಿಸಿ-50/ಪ್ರವ್ಯ(ಆ&ಮಾಸಂ)/3002/2023-24/CYS-01. ದಿನಾಂಕ: 05 APR 2024

ಲಗತ್ತು: 02 ಸಂಖ್ಯೆಯ ನಮೂನೆಗಳು.

## ಸುತ್ತೋಲೆ

ವಿಷಯ: 2023-24 ನೇ ಸಾಲಿನ ಆಸ್ತಿ ಹಾಗೂ ಹೊಣೆಗಳ ವಿವರಗಳ ಸಲ್ಲಿಕೆ ಬಗ್ಗೆ.

ಉಲ್ಲೇಖ: ಕವಿಪ್ರನಿನಿ/ಬಿ99/ಬಿ5ಬಿ/11333/2009-10, ದಿನಾಂಕ:15.03.2024.

*****

ನೌಕರರ ಸೇವಾ (ನಡತೆ) ನಿಬಂಧನೆಗಳ ಅನ್ವಯ ಅಧಿಕಾರಿಗಳು/ ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ನಿಗದಿತ ನಮೂನೆಯಲ್ಲಿ ಪ್ರತೀ ವರ್ಷವೂ ಸಲ್ಲಿಸಬೇಕಾಗಿರುತ್ತದೆ. ಅದರಂತೆ, ರಾಜ್ಯಾವಾರು ಪದವೃಂದದ ಅಧಿಕಾರಿಗಳು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ, ಬೆವಿಕಂ ನಿಂದ ನೇಮಕಾತಿ ಹೊಂದಿರುವ ಅಧಿಕಾರಿಗಳು ಪ್ರಧಾನ ವ್ಯವಸ್ಥಾಪಕರು(ಆ & ಮಾಸಂ) ಬೆವಿಕಂ ಕಂಪನಿ ಕಾರ್ಯಾಲಯ ಇವರಿಗೆ ಹಾಗೂ ಇತರೆ ಸಿಬ್ಬಂದಿಯು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳಿಗೆ ತಮ್ಮ **ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು** ಸಲ್ಲಿಸತಕ್ಕದ್ದು.

ಈ ಕುರಿತಂತೆ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ:

1. ನಿಗಧಿತ ನಮೂನೆ-1 ಮತ್ತು ನಮೂನೆ-2 ರಲ್ಲಿ ಎಲ್ಲಾ ಅಧಿಕಾರಿಗಳು/ನೌಕರರು ದಿನಾಂಕ:01.04.2023 ರಿಂದ ದಿನಾಂಕ:31.03.2024 ರ ವರೆಗಿನ ಅವಧಿಯ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.
2. ಬೆಸ್ಕಾಂ ವ್ಯಾಪ್ತಿಯಲ್ಲಿ ನೇಮಕಾತಿ ಹೊಂದಿರುವ ಅಧಿಕಾರಿಗಳು ತಮ್ಮ ವಿವರಗಳನ್ನು ಹಾಗೂ ಪಿ.ಐ.ಎನ್ ಸಂಖ್ಯೆಯನ್ನು ತಪ್ಪದೇ ನಮೂದಿಸಿ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ), ಕಂಪನಿ ಕಾರ್ಯಾಲಯ, ಬೆವಿಕಂ ರವರಿಗೆ ನೇರವಾಗಿ ಸಲ್ಲಿಸತಕ್ಕದ್ದು.
3. ಅಧಿಕಾರಿಗಳು/ನೌಕರರು 2023-24 ರ ಆರ್ಥಿಕ ವರ್ಷದ ಅವಧಿಯ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು ಕೊನೆಯ ದಿನಾಂಕ:31.05.2024.
4. ಗುಂಪು-'ಎ' ಮತ್ತು 'ಬಿ' ನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರ ಸಲ್ಲಿಸಿದ ಬಗ್ಗೆ ಜೂನ್-2024 ರ ತಿಂಗಳ ವೇತನದ ಹುಂಡಿಯಲ್ಲಿ ದೃಢೀಕರಿಸತಕ್ಕದ್ದು.
5. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಚರ/ಸ್ಥಿರ ಆಸ್ತಿ ಮತ್ತು ಹೊಣೆ ವಿವರಗಳನ್ನು 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಮೇಲಾಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೆ ತರಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಬೇಕಿರುವ ನಮೂನೆಗಳನ್ನು ಬೆವಿಕಂ ಜಾಲತಾಣ **https://bescom.karnataka.gov.in/** ನಲ್ಲಿ ಪಡೆಯಬಹುದು.

ಸಿ.ಎನ್ ಮಂಜುನಾಥ, ಕ.ಆ.ಸೇ
ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.)
ಬೆವಿಕಂ.

-2

ಪ್ರತಿ:

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಬೆವಿಕಂ.
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಸಹಾಯಕ ಲೆಕ್ಕಾಧಿಕಾರಿ, ಬೆವಿಕಂ.
7. ಆಪ್ತ ಕಾರ್ಯದರ್ಶಿ-ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂತ್ರಿಕ)/ ನಿರ್ದೇಶಕರು(ಹಣಕಾಸು), ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
8. ಉ.ಪ್ರ.ವ್ಯ(ಸಿ)/ಮು.ಕ/ಕ.ಪ್ರ.